ಮಟ್ಟಕ್ಕೆ ಬೆಳೆಸಿದೆ. ಅವರ ಲೇಟ್ ಸ್ವಿಂಗ್‌ಗಳು ಹಾಗೂ ಪಕ್ಕಾ ಲೈನ್ ಅಂಡ್ ಲೆಂಗ್ತ್ ಎಸೆತಗಳು ಎದುರಾಳಿಗಳಿಗೆ ಒಡ್ಡುತ್ತಿರುವ ಸವಾಲುಗಳೇ ಅವರನ್ನು ಚಿಂತೆಗೀಡು ಮಾಡಿರುವುದಕ್ಕೆ ಹಲವು ಉದಾಹರಣೆಗಳಿವೆ. ಪಾಕಿಸ್ತಾನದ ಆರಂಭಿಕ ಹಾಗೂ ಅಪಾಯಕಾರಿ ಬ್ಯಾಟ್ಸ್‌ಮನ್ ಬಾಬರ್ ಆಜಂ ಅವರನ್ನು ಏಷ್ಯಾ ಕಪ್‌ನ ಮೊದಲ ಪಂದ್ಯದಲ್ಲಿ ಔಟ್ ಮಾಡಲು ಶಾರ್ಟ್ ಲೆಂಗ್ತ್ ಎಸೆತವನ್ನು ಅವರು ಪ್ರಯೋಗಿಸಿದ್ದ ಪರಿಯಲ್ಲೂ ಜಾಣ್ಮೆ ಇದ್ದದ್ದು ಸ್ಪಷ್ಟ.

ಹಿಂದೆ ಹರ್ಷಲ್ ಪಟೇಲ್ ತಮ್ಮ ವೇಗ ವೈವಿಧ್ಯದಿಂದ ಗಮನ ಸೆಳೆದಿದ್ದರು. ಮಹಮ್ಮದ್ ಸಿರಾಜ್ ವೇಗ ಹಾಗೂ ಸ್ವಿಂಗ್ ಬೆರೆಸಿದ ದಾಳಿಯಿಂದ ವಿದೇಶಿ ನೆಲದಲ್ಲಿಯೂ ಮಿಂಚಬಲ್ಲ ಪ್ರಚ್ಛನ್ನ ಶಕ್ತಿಯನ್ನು ಹೊಂದಿದ್ದರು. ಈಗ ಅವರನ್ನು ಹಾಗೂ ಎಸೆತಗಳಲ್ಲಿ ವೈವಿಧ್ಯ ಕಡಿಮೆಯಿದ್ದೂ ಆಲ್‌ರೌಂಡರ್ ರೂಪದಲ್ಲಿ ಒದಗಿಬಂದಿದ್ದ ಶಾರ್ದೂಲ್ ಠಾಕೂರ್ ಅವರನ್ನು ಎದುರಾಳಿ ತಂಡದ ಅನೇಕರು ಅರಿತಿದ್ದಾರೆ. ಹೀಗಾಗಿ ಅವೇಶ್ ಖಾನ್ ತರಹದ ವೇಗಮುಖಿ ಬೌಲರ್‌ಗೆ ಒಂದಿಷ್ಟು ಅವಕಾಶ ಕೊಡಬೇಕೆನ್ನುವುದು ರಾಹುಲ್ ದ್ರಾವಿಡ್ ನಡೆ. ಅವೇಶ್ ವೇಗ, ಅರ್ಶದೀಪ್ ಎಡಗೈ ವೈವಿಧ್ಯ ಎರಡರ ಕಾಂಬಿನೇಷನ್ ಕೊಡುವ ಫಲಿತಾಂಶವನ್ನು ಗಮನಿಸಿ, ಮುಂದೆ ಅವರಿಬ್ಬರನ್ನು ಹೇಗೆ ದುಡಿಸಿಕೊಳ್ಳಬಹುದೆನ್ನುವುದನ್ನು ನಿರ್ಣಯಿಸಲು ವಿಶ್ವಕಪ್ ಮುಂಚಿನ ಸರಣಿಗಳು ಪ್ರಯೋಗಶಾಲೆಯಂತೆ. ಏಷ್ಯಾ ಕಪ್‌ನ ಮೊದಲೆರಡು ಪಂದ್ಯಗಳಲ್ಲಿ ಅಂದುಕೊಂಡ ಮಟ್ಟದಲ್ಲಿ ಅವೇಶ್ ನಿಯಂತ್ರಣ ಸಾಧಿಸಲಿಲ್ಲ. ಅವರ ಎಸೆತಗಳಲ್ಲಿ ಇರುವ ವೇಗವೇ ತುಸು ತಪ್ಪೆಸಗಿದರೂ ಬ್ಯಾಟ್ಸ್‌ಮನ್‌ಗಳಿಗೆ ವರದಾನವಾಗಬಲ್ಲದು ಎನ್ನುವುದಕ್ಕೆ ಕೆಲವು ಉದಾಹರಣೆಗಳು ಸಿಕ್ಕವು.

ಭುವಿ ಹಾಗೂ ತಂಡಕ್ಕೆ ಸೇರ್ಪಡೆಯಾಗಲಿರುವ ಬೂಮ್ರಾ ಸ್ಥಾನ ಪಕ್ಕಾ ಎಂದೇ ಕ್ರಿಕೆಟ್ ಪಂಡಿತರು ಅಭಿಪ್ರಾಯಪಡುತ್ತಿದ್ದಾರೆ. ಮೂರನೇ ವೇಗದ ಬೌಲರ್ ಆಗಿ ಮೊಹಮ್ಮದ್ ಶಮಿ ಅವರನ್ನೇ ನೆಚ್ಚಿಕೊಳ್ಳುವುದು ಸೂಕ್ತ ಎಂದು ಭಾರತ ತಂಡದ ಮಾಜಿ ಫೀಲ್ಡಿಂಗ್ ಕೋಚ್ ಶ್ರೀಧರ್ ತಮ್ಮ ಅಂಕಣದಲ್ಲಿ ಬರೆದುಕೊಂಡಿದ್ದಾರೆ. ಭಾರತವು ಐದು ಬೌಲರ್‌ಗಳ ಕಾಂಬಿನೇಷನ್‌ನ ತಂಡವನ್ನೇ ನೆಚ್ಚಿಕೊಳ್ಳುವುದನ್ನು ಇನ್ನಾದರೂ ಬಿಡಬೇಕು ಎಂದು ಕಳೆದ ವರ್ಷ ಆಕಾಶ್ ಚೋಪ್ರಾ ಹೇಳಿದ್ದು ಟೆಸ್ಟ್ ಕ್ರಿಕೆಟ್‌ನ ಮಟ್ಟಿಗೆ ಸತ್ಯವಾಗಿತ್ತು. ಟ್ವೆಂಟಿ20 ಕ್ರಿಕೆಟ್‌ನಲ್ಲಿ ಆಲ್‌ರೌಂಡರ್‌ಗಳ ನೆಚ್ಚುಗೆ ಸದಾ ಇದ್ದೇ ಇದೆ. ಹಾರ್ದಿಕ್ ತಮ್ಮ ಪ್ರಭಾವಿ ಶಾರ್ಟ್ ಪಿಚ್‌ಗಳಿಂದ ಎದುರಾಳಿ ಬ್ಯಾಟ್ಸ್‌ಮನ್‌ಗಳು ವಿಕೆಟ್ ಚೆಲ್ಲುವಂತೆ ಮಾಡುತ್ತಿರುವುದನ್ನು ಎರಡು ಸರಣಿಗಳಿಂದ ನೋಡಿದ್ದೇವೆ. ಬ್ಯಾಟಿಂಗ್‌ನಲ್ಲೂ ಅವರು ಲಯಕ್ಕೆ ಮರಳಿರುವುದು ಹಾಗೂ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ ತಂಡವನ್ನು ಅವರು ಮುನ್ನಡೆಸಿಯೂ ಒತ್ತಡದ ನೊಗವನ್ನು ಸಲೀಸಾಗಿ ಹೊತ್ತು ನಡೆದದ್ದು ಅವರ ಮನೋಬಲ ಹೆಚ್ಚಾಗಿರುವುದಕ್ಕೆ ಸಾಕ್ಷಿ. ಶಮಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಆಡಿದ ನಂತರ ಒಂದು ಅಂತರರಾಷ್ಟ್ರೀಯ ಟ್ವೆಂಟಿ20 ಪಂದ್ಯವನ್ನಷ್ಟೆ ಆಡಿರುವುದು ವಿಶ್ವಕಪ್‌ನಲ್ಲಿ ಅವರನ್ನು ಆಡಿಸುವ ಸಾಧ್ಯತೆಯ ಕುರಿತು ತುಸು ಅನುಮಾನ ಮೂಡಿಸಿದೆ.

ಭುವಿ, ಬೂಮ್ರಾ, ಶಮಿ, ಹಾರ್ದಿಕ್ ಪಾಂಡ್ಯ ಹಾಗೂ ಯುಜುವೇಂದ್ರ ಚಹಲ್—ಇದು ಟ್ವೆಂಟಿ20 ವಿಶ್ವಕಪ್‌ಗೆ ಉತ್ತಮ ಕಾಂಬಿನೇಷನ್ ಎನ್ನುವುದು ಸದ್ಯಕ್ಕೆ ಬಹುತೇಕ ಕ್ರಿಕೆಟ್ ಪಂಡಿತರ ಅಭಿಪ್ರಾಯ. ರವೀಂದ್ರ ಜಡೇಜಾ ಉತ್ತಮ ಆಯ್ಕೆಯಾಗಿ ಸದಾ ಇರಬಲ್ಲರೆನ್ನುವುದಕ್ಕೆ ಅವರ ಕ್ಷೇತ್ರರಕ್ಷಣೆಯ ಚುರುಕುತನದ ಕಾಣ್ಕೆಯೂ ಕಾರಣ. ಅವರು, ಚಹಲ್ ಇಬ್ಬರ ಸ್ಪಿನ್ ದಾಳಿಯ ತಂತ್ರ ವಿದೇಶಿ ನೆಲಕ್ಕೆ ಹೊಂದುತ್ತದೆನ್ನುವುದಕ್ಕೂ ಉದಾಹರಣೆಗಳಿವೆ. ಆರ್. ಅಶ್ವಿನ್ ಅವರನ್ನು ಬ್ಯಾಕ್‌ಅಪ್ ಸ್ಪಿನ್ ಬೌಲರ್ ಆಗಿ ಪರಿಗಣಿಸಬೇಕೆನ್ನುವುದು ವೆಂಕಟೇಶ್ ಪ್ರಸಾದ್ ತರಹದ ಹಿರಿಯ ತಲೆಯ ಸಲಹೆ. ಅಶ್ವಿನ್ ಅವರನ್ನೂ ಆಲ್‌ರೌಂಡ್ ಎಂದೇ ಪರಿಗಣಿಸಬೇಕಾಗಿರುವುದರಿಂದ ಈ ಸಲಹೆ ಅರ್ಥಪೂರ್ಣ. ಅಕ್ಷರ್ ಪಟೇಲ್ ಕೂಡ ಬ್ಯಾಟಿಂಗ್‌ನಲ್ಲಿ ಫಿನಿಷಿಂಗ್ ಮಾಡಬಲ್ಲ ಆಲ್‌ರೌಂಡ್ ಆಗಿ ಇತ್ತೀಚೆಗೆ ಪದೇಪದೇ ಆಟವನ್ನು ರುಜುವಾತುಪಡಿಸಿದ್ದಾರೆ.

ಟ್ವೆಂಟಿ20 ವಿಶ್ವಕಪ್‌ನಲ್ಲಿ ಯಾವ ಯಾವ ವೇಗಿಗಳು ಆಡಬೇಕು ಎಂದು ರವಿ ಶಾಸ್ತ್ರಿ ಇತ್ತೀಚೆಗೆ ತಮ್ಮ ವಾದ ಮಂಡಿಸಿದ್ದರು. ಅವರ ಪ್ರಕಾರ ಭುವಿ, ಬೂಮ್ರಾ, ಶಮಿ ಅಲ್ಲದೆ ಅರ್ಶದೀಪ್ ತಂಡದಲ್ಲಿ ಇರಬೇಕು. ಆಸ್ಟ್ರೇಲಿಯಾದ ನೆಲದಲ್ಲಿ ಚೆಂಡು ಪುಟಿಯುವಂತೆ ಬೌಲ್ ಮಾಡುವ ಹಾಗೂ ಅಪರೂಪದ ಕೋನದಲ್ಲಿ ಚೆಂಡು ನುಗ್ಗುವಂತೆ ಎಸೆತಗಳನ್ನು ಹಾಕುವ ಬೌಲರ್ ಅಗತ್ಯವಿದೆ. ಅರ್ಶದೀಪ್‌ಗೆ ಅಂತಹ ಸಾಮರ್ಥ್ಯ ಇದೆ ಎನ್ನುವುದು ರವಿಶಾಸ್ತ್ರಿ ವಾದ. ಆಸ್ಟ್ರೇಲಿಯಾ ನೆಲದಲ್ಲಿ ಎಡಗೈ ವೇಗಿ ಇದ್ದಲ್ಲಿ ತಂಡದ ಆತ್ಮವಿಶ್ವಾಸ ಹೆಚ್ಚಾಗುವುದರಲ್ಲಿ ಅನುಮಾನವೇ ಇಲ್ಲ ಎಂದೂ ಅವರು ಮಾತು ಸೇರಿಸಿದ್ದರು.

ಶಹೀನ್ ಅಫ್ರಿದಿಯ ಎಡಗೈ ವೇಗದ ಬೌಲಿಂಗ್ ಆಡುವ ಅವಕಾಶ ಭಾರತದ ಬ್ಯಾಟ್ಸ್‌ಮನ್‌ಗಳಿಗೆ ಸಿಗುವುದೇ ಅಪರೂಪ. ಅದರಿಂದ ಅವರೆಲ್ಲ ಸದ್ಯಕ್ಕೆ ವಂಚಿತರಾಗಿದ್ದಾರೆ. ವಿಶ್ವಕಪ್ ಟ್ವೆಂಟಿ20ಯಲ್ಲಿ ಅದಕ್ಕೆ ಕಾಲ ಕೂಡಿಬರಬಹುದು. ಎಡಗೈ ವೇಗಿಗಳ ಅಂತಹ ಸೊಗಸುಗಾರಿಕೆಯನ್ನು ಭಾರತದಲ್ಲಿ ನೋಡಲು ಇನ್ನೂ ಎಷ್ಟು ದಿನ ಕಾಯಬೇಕೊ. ಯಾಕೆಂದರೆ, ಅರ್ಶದೀಪ್ ಅವರ ವೇಗಕ್ಕೂ ಶಹೀನ್ ವೇಗಕ್ಕೂ ದೊಡ್ಡ ಅಂತರವಂತೂ ಇದೆ.

ಪ್ರತಿಕ್ರಿಯಿಸಿ: feedback@sudha.co.in




ಅವೇಶ್ ವೇಗಾವೇಶ

‘ಆಸ್ಟ್ರೇಲಿಯಾ ನೆಲಕ್ಕೆ ಎಡಗೈ ವೇಗಿ ಬೇಕಾ? ಇದೋ ನಾನು’ ಎನ್ನುತ್ತಿದ್ದಾರೆ ಅರ್ಶದೀಪ್